# ನನ್ನ ಪ್ರೀತಿಯ ಅಜ್ಜ

ಅಜ್ಜನವರೊಂದಿಗೆ ನನ್ನ ಒಡನಾಟದ ಕೆಲವು ನೆನಪುಗಳನ್ನು ನಿಮ್ಮೊಂದಿಗೆ ಮೆಲುಕು ಹಾಕುತ್ತೇನೆ. ಅಜ್ಜನವರೊಟ್ಟಿಗೆ ನನ್ನ ಒಡನಾಟ ನಾನು ಚಿಕ್ಕವನಿರುವಾಗ ಅಂದರೆ ನನಗೆ ಅಂದಾಜು ೧೦ ವರ್ಷ ಆಗಿದ್ದಾಗ ಪ್ರಾರಂಭವಾಯಿತು. ನಮ್ಮಲ್ಲಿಗೆ ಅವರು ದಿನಾಲು ಬರುತ್ತಿದ್ದರು. ನಾನು ನನ್ನ ತಂದೆಯವರೊಟ್ಟಿಗೆ ಅಜ್ಜನವರಿದ್ದಲ್ಲಿಗೆ ಹೋಗುತ್ತಿದ್ದೆ. ಬರಬರುತ್ತಾ ನಮ್ಮ ಒಡನಾಟ ಬಹಳ ಗಾಢವಾಗಿ ಮುಂದುವರೆಯಿತು. ನಾನು ಎಲ್ಲಿಗೆ ಹೋದರೂ ಅಜ್ಜನವರು ನನ್ನ ಜೊತೆಯಲ್ಲಿ ಬರುತ್ತಿದ್ದರು.

ನಾನು ಅವರನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದೆ. ನನ್ನ ದೃಷ್ಟಿಗೆ ಅಜ್ಜನವರು ವ್ಯವಹಾರದಿಂದ ಪಾರಮಾರ್ಥಿಕವನ್ನು ಸಾಧಿಸಿದ ಅನುಭಾವಿಯಂತೆ ಕಂಡರು. ಮನಸಿನಂತೆ ಮಾತು, ಮಾತಿನಂತೆ ಕೃತಿ. ತ್ರಿಕರಣ ಪೂರ್ವಕವಾದ ವ್ಯವಹಾರ. ಇದು ಅದ್ಭುತ. ಅವರ ಮಾತಿನಲ್ಲೇ ಹೇಳುವುದಾದರೆ ಪಾರಮಾರ್ಥಿಕ ವಿಚಾರ ಕೂಲಿಯವನಿಗೂ ಅನ್ವಯಿಸಬೇಕು. ಆಗ ಮಾತ್ರ ಅದು ಸಾರ್ಥಕ. ಗೀತೆಯಲ್ಲಿ ಕೃಷ್ಣ ಹೇಳಿದ 'ಕರ್ಮಣ್ಯೇವಾಧಿಕಾರಸ್ತೇ..' ಅಕ್ಷರಶಃ ಅವರ ಜೀವನದಲ್ಲಿ ನೂರಕ್ಕೆ ನೂರು ಪಾಲಿಸಲ್ಪಿಟ್ಟಿತ್ತು. ಕೃತಿ ಮೊದಲು ಮಾತು ನಂತರ ಇದು ಅಜ್ಜನವರ ರೀತಿಯಾಗಿತ್ತು. ಈ ವಿಷಯದಲ್ಲಿ ಅಜ್ಜನವರ ರೀತಿ ಗಾಂಧೀಜಿಯವರನ್ನು ನೆನಪಿಸುವಂತಿತ್ತು.

ಅವರು ದಿವ್ಯಜೀವನದಲ್ಲಿ ಹೇಳಿದ ಸತ್ಯ, ಅಹಿಂಸೆ, ಶರಣಾಗತಿ ಇದು ನನ್ನಂತವರಿಗೆ ಆಚರಣೆಯಲ್ಲಿ ತರಲು ಸಾಧ್ಯವೇ ಎಂದು ನನಗನ್ನಿಸುತ್ತಿತ್ತು. ಇದನ್ನು ಅವರಲ್ಲಿ ಕೇಳಿದಾಗ ಇದಕ್ಕೆ ಏನಪ್ಪಾ ಹಣಬೇಕಾ? ಜನರ ಸಹಕಾರ ಬೇಕಾ? ಒಂದು ಸ್ವಲ್ಪ ಪ್ರಯತ್ನ ಬೇಕಷ್ಟೆ ಎನ್ನುತ್ತಿದ್ದರು. ಆದರೆ ಇದು ನನಗೆ ಕಬ್ಬಿಣದ ಕಡಲೆಯನ್ನು ಜಗಿದಂತೆ ಎಂದು ಅನಿಸುತಿತ್ತು. ಹಾಗಾದರೆ ನನ್ನಂತವನ ಕತೆ ಏನು ಎಂದು ಅವರಲ್ಲಿ ಕೇಳಿದರೆ ನಿಧಾನವಾಗಿ ನಾಮಸ್ಮರಣೆಯನ್ನು ಅಭ್ಯಾಸ ಮಾಡು ನಂತರ ಅದುವೇ ನಿನ್ನನ್ನು ಆ ಹಾದಿಯಲ್ಲಿ ಮುಂದುವರೆಸುತ್ತದೆ ಎಂದು ಹೇಳಿದರು. ಆದರೆ ನನಗೆ ಅದು ಸಾಧ್ಯವಾಗಬಹುದೇ ಎನ್ನುವ ಸಂಶಯ ನನ್ನನ್ನು ಈಗಲೂ ಕಾಡುತ್ತಿದೆ.ಯಾರಿಗೆ ಗೊತ್ತು ಆಗಲೂ ಬಹುದು.ಅದು ಅವರಿಗೆ ಗೊತ್ತು ಅದಕ್ಕೆ ನನ್ನ ಯಥಾ ಪ್ರಯತ್ನ ಮಾಡುತ್ತಿರುವೆ.

ಅಹಿಂಸೆಗೆ ಅಜ್ಜನವರು ಒಂದು ಉದಾಹರಣೆಯನ್ನು ಚೆನ್ನಾಗಿ ನೀಡುತ್ತಿದ್ದರು. ಮರವನ್ನು ಕೊಲ್ಲಲು ಹಿಂಸೆಯಿಂದ ಅದರ ಕೊಂಬೆಗಳನ್ನು ಕಡಿದರೆ ಅದು ಸ್ವಲ್ಪದಿನಗಳ ನಂತರ ಅದರ ಎರಡರಷ್ಟು ಚಿಗುರಿ ಬೆಳೆಯುತ್ತದೆ. ಆದರೆ ಆ ಮರದ ತಾಯಿಬೇರನ್ನು ಮಣ್ಣಿನ ಸಂಪರ್ಕದಿಂದ ಯಾವ ಹಿಂಸೆಯನ್ನೂ ಮಾಡದೆ ಬೇರ್ಪಡಿಸಿದರೆ ಆ ಮರ ೪ ದಿನಗಳಲ್ಲಿ ಸತ್ತು ಹೋಗುತ್ತದೆ. ಅದೇ ರೀತಿ ನಮ್ಮ ಜೀವನದಲ್ಲಿ ಕಾಮ ಕ್ರೋಧಾದಿಗಳನ್ನು ಬಲವಂತವಾಗಿ ಹಿಂಸೆಯಿಂದ ನಿಗ್ರಹಿಸಿದರೆ ಅದು ಇನ್ನಷ್ಟು ಬೆಳೆದು ನಮ್ಮನ್ನು ಕಾಡುತ್ತದೆ. ಮೂಲಕ್ಕೆ ಇಳಿದು ಬೇರನ್ನು ತುಂಡರಿಸಿದಾಗ ಮಾತ್ರ ಅದು ಮತ್ತೆ ಬರಲಾರದು ಎನ್ನುತ್ತಿದ್ದರು.

ಅಜ್ಜ ನಮ್ಮ ಜೀವನದಲ್ಲಿ ಏನೇ ಬಂದರೂ ಸ್ವೀಕರಿಸಬೇಕು ಎನ್ನುತ್ತಿದ್ದರು. ಸ್ವೀಕಾರ ಎಂಬ ಮೂರಕ್ಷರದ ಪದವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಅದ್ಭುತವನ್ನೇ ಮಾಡಬಲ್ಲದು. ಅವರ ಜೀವನದಲ್ಲಿ ಇದು ಸಂಭವಿಸಿತ್ತು. ಬಿಂದುವು ಸಿಂಧುವಾಯಿತು. ಅಣುವು ಮಹತ್ತಾಯಿತು. ಮೃತ್ಯುವನ್ನೇ ಜಯಿಸಿ ಅಮೃತವನ್ನು ಹೊಂದಿತು.

ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ಎಂದು ಗೀತೆಯಲ್ಲಿ ಹೇಳಿದಂತೆ ಅಜ್ಜನವರು ಕೃತಿಯಲ್ಲಿ ನಡೆದು ತೋರಿಸಿದ ವಿಚಾರಗಳನ್ನು ನಾವು ನಮ್ಮ ಜೀವನದಲ್ಲಿ ಕಿಂಚಿತ್ತಾದರೂ ಅಳವಡಿಸಿಕೊಂಡರೆ ಅದು ನಮ್ಮನ್ನು ಆತ್ಮೋನ್ನತಿಗೆ ಒಯ್ಯಬಲ್ಲುದು ಎಂದು ಭಾವಿಸುತ್ತಾ ಎಲ್ಲರಿಗೂ ಅಜ್ಜನವರ ಮಾತುಗಳು ದಾರಿದೀಪವಾಗಲಿ ಎಂದು ಆಶಿಸುತ್ತಾ ನನ್ನ ನಾಲ್ಕು ವಾಕ್ಯಗಳ ಲೇಖನಕ್ಕೆ ವಿರಾಮ ನೀಡುತ್ತೇನೆ.

ಸಿ. ವಿ. ಸುಬ್ರಹ್ಮಣ್ಯ
ನೆಟ್ಟಾರು